**ಓ ಎಸ್ ನಂಃ 502/2023**
**ಪಿ ಡಬ್ಲ್ಯೂ ಃ 1**

**ದಿಃ 13.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್ ಜಿ ಯು ವಕೀಲರಿಂದಃ-**

ಈ ದಾವೆಯ ಪ್ರತಿವಾದಿ ನನಗೆ ಸುಮಾರು 5-6 ವರ್ಷಗಳಿಂದ ಪರಿಚಯ ಇರುತ್ತಾರೆ. ಪ್ರತಿವಾದಿಯು ನಮ್ಮ ಅಂಗಡಿಯಲ್ಲಿ ಬಟ್ಟೆ ಖರೀದಿ ಮಾಡಲು ಬರುತ್ತಿದ್ದ ಕಾರಣ ಅವರು ನನಗೆ ಪರಿಚಯ ಇರುತ್ತಾರೆ. ನಮ್ಮ ಅಂಗಡಿಯನ್ನು ನಾನು ಮತ್ತು ನನ್ನ ಅಣ್ಣ ಇಬ್ಬರು ವ್ಯಾಪಾರ ಮಾಡುತ್ತೇವೆ. ಪ್ರತಿವಾದಿಯು ನನ್ನ ತಂದೆ ಹಾಗೂ ನನ್ನ ಅಣ್ಣನಿಗೂ ಪರಿಚಯ ಇರುತ್ತಾರೆ. ಪ್ರತಿವಾದಿಯು ನನಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾನ ಪತ್ರದ ಪ್ರತಿಯನ್ನು ನನಗೆ ಕೊಟ್ಟಿರುತ್ತಾರೆ. ನಿಪಿ 3 ರ ದಾನ ಪತ್ರವನ್ನು ತಮಗೆ ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿಯು ನನಗೆ ನೀಡಿರುತ್ತಾರೆ. ನಿಪಿ 3 ರ ದಾನ ಪತ್ರದ ಮೂಲ ಪತ್ರದ ಪ್ರತಿಯನ್ನು ಪ್ರತಿವಾದಿಯು ತಮಗೆ ತೋರಿಸಿದ್ದಾರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ 3 ರ ದಾನಪತ್ರವನ್ನು ಪ್ರತಿವಾದಿಯು ತಮಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 23.05.2022 ರಂದು ಪ್ರತಿವಾದಿಯು ನನಗೆ ನಿಪಿ 3 ರ ದಾನ ಪತ್ರವನ್ನು ನೀಡಿರುತ್ತಾರೆ. ಪ್ರತಿವಾದಿಯು ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಇರಲಿಲ್ಲ ಆದ ಕಾರಣ ನಿಪಿ 3 ರ ದಾನಪತ್ರವನ್ನು ಪ್ರತಿವಾದಿಯು ತಮಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 4 ರ ನೋಟಿಸ್ ನ್ನು ತಾವು ಪ್ರತಿವಾದಿಗೆ ನೀಡುವ ಸಂದರ್ಭದಲ್ಲಿ ಸಹ ತಮಗೆ ನಿಪಿ 3 ರ ದಾನ ಪತ್ರದ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ತಮ್ಮಿಂದ ರೂ. 2,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತಾರೆ ಸದರಿ ಸಾಲದ ಭದ್ರತೆಗಾಗಿ ನಿಪಿ 1 ರ ಕ್ರಯದ ಕರಾರು ಪತ್ರವನ್ನು ತಮ್ಮ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಹೊರತು ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ತಾವು ಬಟ್ಟೆ ವ್ಯಾಪಾರದ ಜೊತೆಗೆ ಗಿರಿವಿ ವ್ಯವಹಾರವನ್ನು ಸಹ ಮಾಡುತ್ತೀರಿ ಎಂದರೆ ಸರಿಯಲ್ಲ. ನಿಪಿ 1 ರ ಕ್ರಯದ ಕರಾರು ಪತ್ರವನ್ನು ತಾವೇ ತಯಾರು ಮಾಡಿಸಿರುತ್ತೀರಿ ಎಂದರೆ ಸರಿ. ನಿಪಿ 1 ರ ಕ್ರಯದ ಕರಾರು ಪತ್ರದಲ್ಲಿರುವ ಎಲ್ಲಾ ಒಕ್ಕಣೆಯನ್ನು ತಮ್ಮ ಮಾಹಿತಿ ಮೇರೆಗೆ ಟೈಪ್ ಮಾಡಲಾಗಿದೆ ಎಂದರೆ ಸರಿ. ಪ್ರತಿವಾದಿಯು ತಮಗೆ ಕೊಡಬೇಕಾದ ಸಾಲದ ಹಣವನ್ನು ಮುಂದೆ ಕೊಡದಿದ್ದರೆ ಆಗ ಪ್ರತಿವಾದಿಗೆ ಸೇರಿದ ಸ್ವತ್ತನ್ನು ಕಬ್ಜ

ಮಾಡಬೇಕೆಂಬ ಉದ್ದೇಶದಿಂದ ನಿಪಿ 1 ರ ದಾಖಲಾತಿಯನ್ನು ತಾವು ತಯಾರು ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಪಿ1 ರ ಕ್ರಯದ ಕರಾರು ಪತ್ರದಲ್ಲಿ ತೋರಿಸಿರುವ ಮುಂಗಡ ಹಣ ರೂ. 2,00,000/- ಹಣವನ್ನು ತಮ್ಮಿಂದ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ 1 ರ ದಾಖಲಾತಿಯಲ್ಲಿ ಪ್ರತಿವಾದಿಗೆ ರೂ. 3,00,000/- ಹಣವನ್ನು ಚೆಕ್ ಮುಖಾಂತರ ನೀಡಲಾಗಿದ್ದು ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ತಾವೇನಾದರೂ ಪೂರಕ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ನನ್ನ ಖಾತೆಯ ಬ್ಯಾಂಕ್ ಸ್ಟೇಟ್ ಮೆಂಟ್ ಎಕ್ಸ್ ಟ್ರಾಕ್ಟ್ ನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬ್ಯಾಂಕ್ ಸ್ಟೇಟ್ ಮೆಂಟ್ ನಲ್ಲಿ ನಿಪಿ 1 ರ ದಾಖಲಾತಿಯಲ್ಲಿ ನಮೂದು ಮಾಡಿರುವ ಚೆಕ್ ದಿನಾಂಕಕ್ಕೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ದಿಃ 23.05.2022 ರಂದು ನಾನು ಪ್ರತಿವಾದಿಗೆ ನಿಪಿ 1ರ ಕ್ರಯದ ಕರಾರು ಪತ್ರದಲ್ಲಿ ಬರೆದಿರುವ ಚೆಕ್ ನ್ನು ನೀಡಿರುತ್ತೇನೆ. ನಿಪಿ 1 ರ ಕ್ರಯದ ಕರಾರು ಪತ್ರದಲ್ಲಿ ನಮೂದು ಮಾಡಿರುವ ಚೆಕ್ ನಗದೀಕರಣಕ್ಕಾಗಿ ಸಲ್ಲಿಸಿದ್ದಾಗ ಮಾನ್ಯ ಆಗಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ 1 ರ ದಾಖಲಾತಿಯನ್ನು ತಯಾರು ಮಾಡುವ ಸಮಯದಲ್ಲಿ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆಯನ್ನು ಕಡಿಮೆ ತೋರಿಸಿ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ತಾವು ಮೂಲ ದಾಖಲಾತಿಯನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ದಾಖಲಾತಿಗೆ ತಮಗೆ ಸಹಾಯ ಮಾಡುವ ಸಾಕ್ಷಿದಾರರನ್ನು ತಮಗೆ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯು ಅವರ ಗೃಹಕೃತ್ಯಕ್ಕೆ ಮತ್ತು ಸಾಲ, ಮಕ್ಕಳ ವಿದ್ಯಾಭ್ಯಾಸಕೋಸ್ಕರ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿ. ನಿಪಿ 1 ರ ದಾಖಲಾತಿಯಲ್ಲಿ ಈ ಲಾಗಾಯ್ತು 11 ತಿಂಗಳ ಒಳಗಾಗಿ ತಪಶೀಲು ಸ್ವತ್ತಿಗೆ ಸಂಬಂಧಪಟ್ಟಂತೆ ಎಲ್ಲಾ ದಾಖಲಾತಿಗಳನ್ನು ಸಿದ್ದಪಡಿಸಿಕೊಂಡು ಕ್ರಯ ಪತ್ರವನ್ನು ಬರೆದುಕೊಡುವಂತೆ ಒಕ್ಕಣೆ ಇದೆ ಆದರೆ ತಾವು ಎಲ್ಲಾ ದಾಖಲಾತಿಗಳನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಕ್ರಯದ ಕರಾರು ಪತ್ರ ಆದ ನಂತರ ಪ್ರತಿವಾದಿಯು ತಮ್ಮನ್ನು ಯಾವತ್ತು ಸಹ ಭೇಟಿ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು

**ಓ ಎಸ್ ನಂಃ 502/2023**
**ಪಿ ಡಬ್ಲ್ಯೂ ಃ 1**

ಬೆಂಗಳೂರು - ಮಾಗಡಿ ರಸ್ತೆಯ ಪಕ್ಕದಲ್ಲಿರುವ ಸ್ವತ್ತು. ದಾವಾ ಸ್ವತ್ತಿನ ಮೌಲ್ಯ 1 ಗುಂಟೆಗೆ ರೂ. 3,00,000/- ಇದ್ದು ತಾವು ಪ್ರತಿವಾದಿಯಿಂದ ಹೆಚ್ಚಿನ ಹಣವನ್ನು ಪಡೆಯುವ ಉದ್ದೇಶದಿಂದ ತಾವು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಈಗಿನ ಮಾರುಕಟ್ಟೆ ಬೆಲೆ ರೂ. 10,00,000/- ಇದೆ ಎಂದರೆ ಸರಿಯಲ್ಲ. ದಿಃ 23.05.2022 ರಲ್ಲಿ ಈ ದಾವ ಸ್ವತ್ತನ್ನು ತಾವು ಕೊಂಡುಕೊಳ್ಳುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ನೋಟಿಸ್ ಗೆ ಜವಾಬು ಪ್ರತಿಯನ್ನು ನೀಡಿರುತ್ತಾರೆ. ಪ್ರತಿವಾದಿಯು ನೀಡಿರುವ ಜವಾಬಿಗೆ ತಾವೇನಾದರೂ ಮರು ಉತ್ತರವನ್ನು ನೀಡಿದ್ದೀರ ಎಂದರೆ ಸರಿ. ಸದರಿ ದಾಖಲಾತಿಯನ್ನು ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ತಾವು ಪ್ರತಿವಾದಿಯ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ತಾವು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಪಿ 1ರ ದಾಖಲಾತಿಯನ್ನು ತಾವು ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**